**<u>ಸಿವಿಲ್ ಜಡ್ಜ ಹಾಗೂ ಜೆ.ಎಂ.ಎಫ್.ಸಿ. ಮುಂಡಗೋಡರವರ ನ್ಯಾಯಾಲಯದಲ್ಲಿ.</u>**

ಸಿ.ಸಿ. ನಂಬರ 17/2017

ಸಿಡಬ್ಲ್ಯೂ- 1/ ಪಿಡಬ್ಲ್ಯೂ-1

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಲೋಪ್ಸಂಗ |
| ತಂದೆ ಹೆಸರು | ಃ | ದೋಣಿಯೋ ಗೋಂಪೋ |
| ವಯಸ್ಸು | ಃ | 60 ವರ್ಷ |
| ವೃತ್ತಿ | ಃ | ಪೂಜಾರಿ |
| ವಾಸ್ತವ್ಯ | ಃ | ಲಾಮಾ ಕ್ಯಾಂಪ ನಂ.2, ಟಿಬೇಟಿಯನ ಕಾಲೋನಿ, ಮುಂಡಗೋಡ. |

ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. ದಿನಾಂಕಃ 05-04-2025.

**(ಸಾಕ್ಷಿಯು ಟಿಬೇಟಿಯನ್ ಭಾಷೆ ಮಾತ್ರ ಬಲ್ಲವರಾಗಿದ್ದು, ಆ ಕಾರಣ Nyima Samdup ರವರನ್ನು ಅನುವಾದಕರನ್ನಾಗಿ ನೇಮಿಸಿಕೊಳ್ಳಲಾಯಿತು. ಅನುವಾದಕರು ಸಾಕ್ಷಿಗೆ ಹಿಂದಿ ಭಾಷೆಯಲ್ಲಿ ಮಾನ್ಯ ಸ.ಸ.ಅಭಿಯೋಜಕರು ಹಿಂದಿ ಭಾಷೆಯಲ್ಲಿ ಕೇಳಿದ ಪ್ರಶ್ನೆಗಳಿಗೆ ಸಾಕ್ಷಿಯು ಟಿಬೇಟಿಯನ್ ಭಾಷೆಯಲ್ಲಿ ಹೇಳಿದ ಉತ್ತರಗಳನ್ನು ಹಿಂದಿ ಭಾಷೆಗೆ ಅನುವಾದಿಸಿರುತ್ತಾರೆ.)**

**<u>ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ. ರವರಿಂದಃ</u>**

ದಿಃ 03-03-2016 ರಂದು ಬೆಳಗಿನ ಜಾವ 4-00 ಗಂಟೆಗೆ ನನ್ನ ಮನೆಯಲ್ಲಿ ಕಳ್ಳತನವಾಗಿರುತ್ತದೆ. ಕಳ್ಳತನವಾಗಿರುವ ಬಗ್ಗೆ ನಾನು ನಮಗೆ ಸಂಬಂಧಪಟ್ಟ ಯೂನಿಯನ್ ನಲ್ಲಿ ಚರ್ಚಿಸಿ ನಂತರ ಅವರ ಮುಖಾಂತರ ದಿಃ 04-03-2016 ರಂದು ಪೊಲೀಸರಲ್ಲಿ ದೂರನ್ನು ದಾಖಲಿಸಲಾಯಿತು. ನಾನು ಪೂಜೆ ಮಾಡುವ ಸಲುವಾಗಿ ಬೆಳಗಿನ ಜಾವ 4-00 ಗಂಟೆಗೆ ಎದ್ದಿದ್ದು, ಹಲ್ಲುಜ್ಜಲು ಹೋದಾಗ ಬಾಗಿಲಿನ ಸದ್ದು ಕೇಳಿರುತ್ತದೆ. ಏನಾಯಿತು ಎಂದು ನಾನು ನೋಡಲಾಗಿ ಒಬ್ಬ ವ್ಯಕ್ತಿಯು ಅಲ್ಲಿಂದ ಹೋದದ್ದನ್ನು ನಾನು ನೋಡಿದೆ. ಸದರಿ ವ್ಯಕ್ತಿಯನ್ನು ನಾನು ಹಿಂಬಾಲಿಸಿಕೊಂಡು ಹೋಗಿ ಅವನನ್ನು ಹಿಡಿದಿದ್ದು, ಅವನು ನನಗೆ ಹೊಡೆದು ಅಲ್ಲಿಂದ ಓಡಿ ಹೋದನು. ಸದರಿ ವ್ಯಕ್ತಿಯು ತನ್ನ ದ್ವಿಚಕ್ರ ವಾಹನವನ್ನು ಅಲ್ಲೇ ಬಿಟ್ಟು ಹೋಗಿರುತ್ತಾನೆ. ಸದರಿ ವ್ಯಕ್ತಿ ಅಲ್ಲಿಂದ ಓಡಿ ಹೋದ ನಂತರ ನಾನು ಮನೆಗೆ ವಾಪಾಸ್ಸು ಬಂದು ನೋಡಿದಾಗ ಮನೆಯಲ್ಲಿ ಎರಡು ಮೊಬೈಲ್ ಗಳು ಮತ್ತು ಒಂದು ಪವರ್ ಬ್ಯಾಂಕ್ ಕಾಣಿಸುತ್ತಿರಲಿಲ್ಲ.

ಒಂದು ಸ್ಯಾಮಸ್ಯಾಂಗ್ ಕಂಪನಿಯ ಮೊಬೈಲ್ ಆಗಿದ್ದು, ಒಂದು ಐಫೋನ್–4 ಆಗಿದ್ದು, ಪವರ್ ಬ್ಯಾಂಕ್ ಯಾವ ಕಂಪನಿಯದ್ದೆಂದು ನನಗೆ ನೆನಪಿಲ್ಲ. ನಾನು ನ್ಯಾಯಾಲಯದ ಮುಂದಿರುವ **ದೂರನ್ನು** ನೋಡಿ ಗುರುತಿಸಿರುತ್ತೇನೆ ಅದನ್ನು **ನಿಪಿ.1** ಎಂದು, ಅದರಲ್ಲಿರುವ ಸಹಿ ನನ್ನದೇ ಆಗಿದ್ದು, ನನ್ನ ಸಹಿಯನ್ನು **ನಿಪಿ.1(ಎ)** ಎಂದು ಗುರುತಿಸಲಾಯಿತು. ನಮ್ಮ **ಯೂನಿಯನ್ ನಿಂದ ಕೊಟ್ಟ ಪತ್ರ**ವನ್ನು ನೋಡುತ್ತಿದ್ದು ಅದನ್ನು **ನಿಪಿ2** ಎಂದು ಗುರುತಿಸಲಾಯಿತು. ದೂರನ್ನು ದಾಖಲಿಸಿದ ನಂತರ 3–4 ಗಂಟೆಯ ಮಧ್ಯದ ಅವಧಿಯಲ್ಲಿ ಪೊಲೀಸರು ಸ್ಥಳಕ್ಕೆ ಬಂದಿದ್ದು, ಆರೋಪಿಯು ಬಿಟ್ಟು ಹೋದ ದ್ವಿಚಕ್ರ ವಾಹನವನ್ನು ನಾನು ಪೊಲೀಸರಿಗೆ ತೋರಿಸಿರುತ್ತೇನೆ. ಸದರಿ ಕಾಲಕ್ಕೆ ಚಾಸಾ2 ಮತ್ತು 3 ರವರು ಸ್ಥಳದಲ್ಲಿ ಹಾಜರಿದ್ದರು. ನ್ಯಾಯಾಲಯದ ಮುಂದಿರುವ **ಪಂಚಾನಾಮೆ**ಯನ್ನು ನೋಡಿ ಗುರುತಿಸಿರುತ್ತೇನೆ ಅದನ್ನು **ನಿಪಿ.3** ಎಂದು, ಅದರಲ್ಲಿರುವ ಸಹಿಗಳು ನನ್ನದೇ ಆಗಿದ್ದು, ನನ್ನ ಸಹಿಗಳನ್ನು ಅನುಕ್ರಮವಾಗಿ **ನಿಪಿ.3(ಎ) ಮತ್ತು (ಬಿ)** ಎಂದು ಗುರುತಿಸಲಾಯಿತು. ಅದಾದನಂತರ ಪೊಲೀಸರು ಸ್ಥಳದಿಂದ ದ್ವಿಚಕ್ರ ವಾಹನವನ್ನು ತೆಗೆದುಕೊಂಡು ಹೋದರು. ನನಗೆ ದಿನಾಂಕ ನೆನಪಿಲ್ಲ, ಆದರೆ ಕಳ್ಳತನವಾದ ಸ್ಯಾಮಸಂಗ್ ಮೊಬೈಲ್ ಸಿಕ್ಕಿರುತ್ತದೆ. ಕಳ್ಳತನವಾದ ಸದರಿ ಮೊಬೈಲನ್ನು ಗುರುತಿಸಲೆಂದು ಪೊಲೀಸರು ಕರೆದಿದ್ದು, ನಾನು ಹೋಗಿ ಗುರುತಿಸಿರುತ್ತೇನೆ. ನಾನು ಸ್ಯಾಮಸಂಗ್ ಮೊಬೈಲನ್ನು ಗುರುತಿಸಿದ ನಂತರ ಪೊಲೀಸರು ಛಾಯಚಿತ್ರವನ್ನು ತೆಗೆದಿರುತ್ತಾರೆ. ಸದರಿ ಕಾಲಕ್ಕೆ ನನ್ನೊಂದಿಗೆ ಇಬ್ಬರು ಹುಡುಗರಿದ್ದು, ಸದರಿಯವರು ಚಾಸಾ6 ಮತ್ತು 7 ರವರಾಗಿರುತ್ತಾರೆ. ನಾನು ಠಾಣೆಯಲ್ಲಿ ಎಷ್ಟು ಗಂಟೆಯಿಂದ ಎಷ್ಟು ಗಂಟೆಯವರೆಗೆ ಇದ್ದೆ ಎಂದು ನನಗೆ ನೆನಪಿಲ್ಲ. ನನಗೆ ವ್ಯಕ್ತಿಯನ್ನು ತೋರಿಸಿರುತ್ತಾರೆ, ಆದರೆ ಸದರಿ ವ್ಯಕ್ತಿ ಯಾರೆಂದು ನನಗೆ ನೆನಪಿರುವುದಿಲ್ಲ. ಸದರಿ ವ್ಯಕ್ತಿಯನ್ನು ನನಗೆ ತೋರಿಸಿದ್ದು, ಅವನು ಹೌದೋ ಅಲ್ಲವೋ ಎಂದು ಸಂಶಯ ಇರುತ್ತದೆ. ನ್ಯಾಯಾಲಯದ ಮುಂದಿರುವ ಛಾಯಚಿತ್ರವನ್ನು ನೋಡಿ ಗುರುತಿಸುತ್ತೇನೆ, ಸದರಿ **ಛಾಯಚಿತ್ರ**ವನ್ನು ಸಾಕ್ಷಿಯು ಗುರುತಿಸಿದ ಕಾರಣ ಅದನ್ನು **ನಿಪಿ4** ಎಂದು ಗುರುತಿಸಲಾಯಿತು. ಸ್ವಲ್ಪ ದಿನಗಳ ನಂತರ ಕಳ್ಳತನವಾದ ಐಫೋನ್ ದೊರೆತಿದ್ದು, ಅದನ್ನು ಗುರುತಿಸುವಂತೆ ಪೊಲೀಸರು ನನ್ನನ್ನು ಠಾಣೆಗೆ ಕರೆದಿದ್ದು, ನಾನು ಠಾಣೆಗೆ ಹೋಗಿ ಐಫೋನನ್ನು ಗುರುತಿಸಿರುತ್ತೇನೆ. ಸದರಿ ಕಾಲಕ್ಕೆ ಒಬ್ಬ ವ್ಯಕ್ತಿ ಇದ್ದ, ಅವನನ್ನು ನನಗೆ ತೋರಿಸಿದರೋ ಇಲ್ಲವೋ ಎಂದು ನನಗೆ ನೆನಪಿಲ್ಲ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಇಂಡೆಮನಿಟಿ ಬಾಂಡಿನ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ಗುರುತಿಸುವ ಸಲುವಾಗಿ **ಇಂಡೆಮನಿಟಿ ಬಾಂಡ**ನ್ನು **ನಿಪಿ5** ಎಂದು, ಸಾಕ್ಷಿಯು ಸಹಿಯನ್ನು **ನಿಪಿ5(ಎ)** ಎಂದು ಗುರುತಿಸಲಾಯಿತು. ಸದರಿ ಎರಡು ಮೊಬೈಲ್ ಗಳನ್ನು ಪೊಲೀಸರು ಕೊಟ್ಟಿರುವುದಿಲ್ಲ, ನ್ಯಾಯಾಲಯದಿಂದ ಬಿಡಿಸಿಕೊಂಡು ಹೋಗುವಂತೆ ಹೇಳಿದ್ದು, ನಾನು ನ್ಯಾಯಾಲಯದಿಂದ ಮೊಬೈಲ್ ಗಳನ್ನು ಬಿಡಿಸಿಕೊಂಡು ಹೋಗಿರುತ್ತೇನೆ. ಸದರಿ ಮೊಬೈಲಗಳನ್ನು ನಾನು ನ್ಯಾಯಾಲಯದಿಂದ ಬಿಡಿಸಿಕೊಂಡು ಮನೆಗೆ ಹೋಗಿ ನೋಡಿದಾಗ ಸದರಿ ಮೊಬೈಲ್ ಗಳಲ್ಲಿ ಚಾರ್ಜ ಇರಲಿಲ್ಲ,

ಚಾರ್ಜ ಮಾಡಿರುತ್ತೇನೆ. ನಾವು ಭಿಕ್ಷುಗಳಾಗಿರುವುದರಿಂದ ಜಾಗವನ್ನು ಬದಲಾಯಿಸುತ್ತಿರುತ್ತೇವೆ, ಹಾಗೆ ಜಾಗವನ್ನು ಬದಲಾಯಿಸುವ ಕಾಲಕ್ಕೆ ಮೊಬೈಲ್ ಗಳು ಎಲ್ಲೋ ಕಳೆದು ಹೋಗಿರುತ್ತವೆ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನಾನು ನೋಡಿರುವುದಿಲ್ಲ.

**(ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಎ.ಪಿ.ಪಿ. ರವರು ಕೋರಿದ ಮೇರೆಗೆ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)**

**ಪಾಟೀ ಸವಾಲು ಃ ಮಾನ್ಯ ಎಪಿಪಿ ರವರಿಂದ.**

ಪೊಲೀಸರು ನನಗೆ ಸ್ಯಾಮಸಂಗ್ ಮೊಬೈಲ್ ತೋರಿಸುವ ಕಾಲಕ್ಕೆ ಪಂಚನಾಮೆ ಜರುಗಿಸಿರುತ್ತಾರೆ ಎಂದರೆ ಸರಿ. ಸದರಿ ಪಂಚನಾಮೆಯನ್ನು ದಿಃ 17-06-2016 ರಂದು ಬೆಳಗ್ಗೆ 9-30 ಗಂಟೆಯಿಂದ 10-15 ಗಂಟೆಯವರೆಗೆ ಜರುಗಿಸಿರುತ್ತಾರೆ ಎಂದರೆ ಸರಿ. ನ್ಯಾಯಾಲಯದ ಮುಂದಿರುವ ಮೊಬೈಲ್ ಜಪ್ತು ಪಂಚನಾಮೆಯನ್ನು ನೋಡುತ್ತಿದ್ದು ಅದನ್ನು ಗುರುತಿಸುತ್ತೇನೆ, ಸದರಿ **ಜಪ್ತು ಪಂಚನಾಮೆ**ಯನ್ನು **ನಿಪಿ6** ಎಂದು, ಅದರಲ್ಲಿರುವ ಸಹಿ ನನ್ನದೇ ಆಗಿದ್ದು, ನನ್ನ ಸಹಿಯನ್ನು **ನಿಪಿ6(ಎ)** ಎಂದು ಗುರುತಿಸಲಾಯಿತು. ಸದರಿ ದಿನದಂದು ಪೊಲೀಸರು ನನಗೆ 3 ನೇ ಆರೋಪಿಯಾದ ಇಸ್ರಾಯಿಲ್ ಮುದ್ದಯ್ಯ ಇಲ್ಲೂರ್ ರವರನ್ನು ತೋರಿಸಿದ್ದು, ಸದರಿ 3 ನೇ ಆರೋಪಿಯು ಮೊಬೈಲ್ ಕಳ್ಳತನ ಮಾಡಿದ ವ್ಯಕ್ತಿಯಿಂದ ಅಂದರೆ 1 ನೇ ಆರೋಪಿಯಿಂದ ಖರೀದಿ ಮಾಡಿದ್ದಾಗಿ ನನಗೆ ತಿಳಿಸಿರುತ್ತಾರೆ ಎಂದರೆ ಸರಿ. ಸದರಿ ದಿನದಂದು ನಾನು ನನ್ನ ಹೇಳಿಕೆಯನ್ನೂ ಸಹ ನೀಡಿರುತ್ತೇನೆ ಎಂದರೆ ನನಗೆ ನೆನಪಿಲ್ಲ. ದಿಃ 15-04-2016 ರಂದು ಪೊಲೀಸರು ನನಗೆ 2 ನೇ ಆರೋಪಿಯನ್ನು ತೋರಿಸಿ, ಈ ವ್ಯಕ್ತಿ ನನಗೆ ಸಂಬಂಧಿಸಿದ ಮತ್ತು ಕಳ್ಳತನವಾದ ಐಫೋನನ್ನು 1 ನೇ ಆರೋಪಿಯಿಂದ ಖರೀದಿಸಿದ್ದಾಗಿ ತಿಳಿಸಿದ್ದರು ಎಂದರೆ ಸರಿ. ಈಗ ನ್ಯಾಯಾಲಯದ ಮುಂದಿರುವ 2 ನೇ ಆರೋಪಿಯೇ ಸದರಿ ದಿನದಂದು ಪೊಲೀಸರು ನನಗೆ ತೋರಿಸಿದ ವ್ಯಕ್ತಿ ಆಗಿರುತ್ತಾನೆ ಎಂದರೆ ಇವನ ರೀತಿಯಲ್ಲೇ ಇದ್ದನು ಎಂದು ಸಾಕ್ಷಿಯು ನುಡಿಯುತ್ತಾರೆ. ದಿಃ 08-10-2016 ರಂದು 1 ನೇ ಆರೋಪಿಯನ್ನು ಪೊಲೀಸರು ನನಗೆ ತೋರಿಸಿರುತ್ತಾರೆ ಎಂದರೆ ಸರಿ. ಸದರಿ ವ್ಯಕ್ತಿಯ ಹೆಸರು ಪರಶುರಾಮ ಕಂಬಾರ ಎಂದರೆ ಸರಿ. 1 ನೇ ಆರೋಪಿಯು ನನಗೆ ಸಂಬಂಧಿಸಿದ ಪವರ್ ಬ್ಯಾಂಕನ್ನು ಹುಬ್ಬಳ್ಳಿಯಲ್ಲಿ ಯಾವುದೋ ಅಪರಿಚಿತ ವ್ಯಕ್ತಿಗೆ ಮಾರಾಟ ಮಾಡಿದ್ದಾಗಿ ಹೇಳಿರುತ್ತಾನೆ ಎಂದರೆ ಸರಿ. ಈ ಬಗ್ಗೆ ನಾನು ಠಾಣೆಯಲ್ಲಿ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ನಾನು ನ್ಯಾಯಾಲಯದಿಂದ ಮೊಬೈಲ್ ಗಳನ್ನು ಬಿಡಿಸಿಕೊಂಡು ಹೋಗುವ ಸಮಯದಲ್ಲಿ ಸದರಿ ಮೊಬೈಲ್ ಗಳನ್ನು ಯಾರಿಗೂ ಮಾರಾಟ ಮಾಡುವುದಿಲ್ಲ ಎಂದು ಮತ್ತು ಅವುಗಳನ್ನು ಜೋಪಾನವಾಗಿ ಇಟ್ಟುಕೊಳ್ಳುತ್ತೇನೆ ಎಂದು ಬಾಂಡನ್ನು ಬರೆದುಕೊಟ್ಟಿದ್ದೆನು ಎಂದರೆ ಸರಿ. ಸಾಕ್ಷಿಯು ಮುಂದುವರೆದು 7 ವರ್ಷಗಳಿಗೊಮ್ಮೆ ಜಾಗ ಬದಲಿಸುವ

ಸಮಯಕ್ಕೆ ಕಳೆದು ಹೋಗಿರುತ್ತದೆ ಎಂದು ನುಡಿಯುತ್ತಾರೆ. ಈಗ ನ್ಯಾಯಾಲಯದ ಮುಂದಿರುವ 2 ನೇ ಆರೋಪಿಯೇ 1 ನೇ ಆರೋಪಿಯಿಂದ ಐಫೋನನ್ನು ಖರೀದಿಸಿದ ವ್ಯಕ್ತಿ ಆಗಿರುತ್ತಾನೆ ಎಂದರೆ ಸರಿ.

**2 ನೇ ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೇಳಿದ್ದು ಕಲ್ಪಿಸಲಾಯಿತು.**

ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

**ಓ .ಹೇ.ಕೇ. ಸರಿ ಇದೆ**

**-Sd-**

**ಪ್ರ.ದ.ನ್ಯಾ.ದಂ. ಮುಂಡಗೋಡ.**